# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 727 (907)
2. ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸುವ ದಿನಾಂಕ : 27.12.2022
4. ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಎಷ್ಟು ಎಕರೆ ಜಮೀನುಗಳು ಸ್ವಾಧೀನದಲ್ಲಿದೆ; (ವಿವರ ನೀಡುವುದು) | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳ ವತಿಯಿಂದ ರಾಜ್ಯದಾದ್ಯಂತ ಕೈಗಾರಿಕಾ ಪ್ರದೇಶಕ್ಕಾಗಿ 87,669-08 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.<br>ಜಿಲ್ಲಾವಾರು ವಿವರಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ. |
| (ಆ) | ಸಾವಿರಾರು ಉದ್ಯಮಿಗಳು ಭೂಮಿ ಹಾಗೂ ಮತ್ತಿತರ ಅಗತ್ಯ ಸೌಲಭ್ಯಕ್ಕಾಗಿ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಪ್ರಯತ್ನಿಸುತ್ತಿದ್ದರೂ, ಅರ್ಜಿ ಸ್ವೀಕಾರವಾಗದಿರುವುದಕ್ಕೆ ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು) | ಬಂಡವಾಳ ಹೂಡಿಕೆ ಪ್ರಸ್ತಾವನೆಗಳನ್ನು https://ebiz.karnataka.gov.in/ebizಪೋರ್ಟಲ್ ನಲ್ಲಿ ಸ್ವೀಕರಿಸಲು ಅವಕಾಶವಿದ್ದು, ಅದರಂತೆ ಅರ್ಜಿಗಳು ಸ್ವೀಕೃತವಾಗುತ್ತಿದೆ. ಅರ್ಜಿ ಸ್ವೀಕೃತವಾಗದೇ ಇರುವ ಕುರಿತು ಯಾವುದೇ ದೂರುಗಳು ಸರ್ಕಾರಕ್ಕೆ ಸ್ವೀಕೃತವಾಗಿರುವುದಿಲ್ಲ. |
| (ಇ) | ಬಹುರಾಷ್ಟ್ರೀಯ ಕಂಪನಿಗಳ ಹೊರತಾಗಿ ಸ್ಥಳೀಯ ಕೈಗಾರಿಕೆಗಳಿಗೆ ಹಾಗೂ ಎಂ.ಎಸ್.ಎಂ.ಇ ಗಳಿಗೆ | ಎಂ.ಎಸ್.ಎಂ.ಇ. ಮತ್ತು ಸ್ಥಳೀಯ ಕೈಗಾರಿಕೆಗಳಿಗೆ ಅನುಕೂಲವಾಗುವಂತೆ ಸರ್ಕಾರ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ:- |

| | | |
|---|---|---|
| | ಅನುಕೂಲವಾಗುವಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ಸಂಪೂರ್ಣ ವಿವರ ನೀಡುವುದು) | ➢ ಕೆ.ಐ.ಎ.ಡಿ.ಬಿ. ಕೈಗಾರಿಕಾ ಪ್ರದೇಶದಲ್ಲಿ ಹಂಚಿಕೆ ಮಾಡಬಹುದಾದ ನಿವೇಶನಗಳನ್ನು ಈ ಕೆಳಕಂಡಂತೆ ಮೀಸಲಿಟ್ಟು ಹಂಚಿಕೆ ಮಾಡಲಾಗುತ್ತಿದೆ:-<br>• ಎಂ.ಎಸ್.ಎಂ.ಇ.ಗಳಿಗೆ ಶೇಕಡಾ 30;<br>• ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಶೇಕಡಾ 24.01;<br>➢ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆ ಮಾಡುವ ನಿವೇಶನಗಳಿಗೆ ಹಂಚಿಕೆ ದರದ ಮೇಲೆ ಶೇಕಡಾ 75 ರಷ್ಟು (2 ಎಕರೆವರೆಗೂ ಮಾತ್ರ) ರಿಯಾಯಿತಿ ನೀಡಿ ಹಂಚಿಕೆ ಮಾಡಲಾಗುತ್ತಿದೆ.<br>➢ ಎಂ.ಎಸ್.ಎಂ.ಇ. ಕೈಗಾರಿಕೆಗಳಿಗೆ 2020-25ರ ಕೈಗಾರಿಕಾ ನೀತಿಯಡಿ ರಿಯಾಯಿತಿ ಹಾಗೂ ಉತ್ತೇಜನಗಳನ್ನು ನೀಡಲಾಗುತ್ತದೆ.<br>➢ ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಕೆಲವು ಮುಖ್ಯ ನಿರಾಕ್ಷೇಪಣಾ ಪತ್ರಗಳನ್ನು ಪಡೆಯಲು 3 ವರ್ಷಗಳವರೆಗೆ ಸಮಯವನ್ನು ವಿಸ್ತರಿಸಿ, ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ 2002ಕ್ಕೆ ತಿದ್ದುಪಡಿ ತರಲಾಗಿದೆ. |

ಸಂಖ್ಯೆ: ಸಿಐ 315 ಐಎಪಿ (ಇ) 2022

(ಡಾ॥ ಮುರುಗೇಶ್ ಆರ್. ನಿರಾಣಿ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

## ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಕೈಗಾರಿಕಾ ಪ್ರದೇಶಗಳಿಗಾಗಿ ಕಲಂ 28(4) ರಡಿ ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಜಿಲ್ಲಾವಾರು ವಿವರ (ಪ್ರಾರಂಭದಿಂದ ಈವರೆಗೆ)

| ಕ್ರ.ಸಂ. | ಜಿಲ್ಲೆ ಹೆಸರು | ಕೈಗಾರಿಕಾ ಪ್ರದೇಶ (ಎ–ಗು) |
|---|---|---|
| 1. | ಬೆಂಗಳೂರು ನಗರ | 9536–08 |
| 2. | ಬೆಂಗಳೂರು ಗ್ರಾಮಾಂತರ | 9962–17 |
| 3. | ರಾಮನಗರ | 4993–09 |
| 4. | ಚಿಕ್ಕಬಳ್ಳಾಪುರ | 2803–09 |
| 5. | ಕೋಲಾರ | 4188–10 |
| 6. | ತುಮಕೂರು | 8694–36 |
| 7. | ದಾವಣಗೆರೆ | 1044–07 |
| 8. | ಬಳ್ಳಾರಿ | 718–20 |
| 9. | ಚಿತ್ರದುರ್ಗ | 156–11 |
| 10. | ಮೈಸೂರು | 7371–26 |
| 11. | ಮಂಡ್ಯ | 1903–08 |
| 12. | ಚಾಮರಾಜನಗರ | 1097–02 |
| 13. | ಹಾಸನ | 3719–10 |
| 14. | ದಕ್ಷಿಣ ಕನ್ನಡ | 2694–27 |
| 15. | ಚಿಕ್ಕಮಗಳೂರು | 365–00 |
| 16. | ಶಿವಮೊಗ್ಗ | 2844–20 |
| 17 | ಉಡುಪಿ | 111–32 |
| 18 | ಕೊಡಗು | 150–20 |
| 19 | ಧಾರವಾಡ | 7070–29 |
| 20 | ಹಾವೇರಿ | 671–07 |
| 21 | ಕೊಪ್ಪಳ | 463–27 |
| 22 | ಬೆಳಗಾವಿ | 2371–32 |
| 23 | ಬಾಗಲಕೋಟೆ | 651–20 |
| 24 | ವಿಜಯಪುರ | 3784–38 |
| 25 | ಉತ್ತರ ಕನ್ನಡ | 258–09 |
| 26 | ಗದಗ | 162–30 |
| 27 | ಕಲಬುರಗಿ | 1942–16 |
| 28 | ಯಾದಗಿರಿ | 3497–34 |
| 29 | ರಾಯಚೂರು | 2687–37 |
| 30 | ಬೀದರ್ | 1751–17 |
| | ಒಟ್ಟು | **87669–08** |

ಸಿಹಿ/-

ವಿಶೇಷ ಜಿಲ್ಲಾಧಿಕಾರಿ